# ಹೊಸತು

## ಲ್ಯಾಕ್ಮೆ ವಿನೈಲ್ ಲಿಕ್ವಿಡ್ ಲೈನರ್




ಲ್ಯಾಕ್ಮೆಯ ಕಾಜಲ್, ಮಸ್ಕರಾ, ಐಲೈನರ್‌ಗಳ ಸಾಲಿಗೆ ಇದೀಗ ಹೊಸ ಮತ್ತೊಂದು ಉತ್ಪನ್ನ ಸೇರಿದೆ. ಅದೇ ಲ್ಯಾಕ್ಮೆ ವಿನೈಲ್ ಲಿಕ್ವಿಡ್ ಲೈನರ್.

ಇದು ನಿಮ್ಮ ನೋಟಕ್ಕೆ ಇನ್ನಷ್ಟು ಹೊಳಪು ನೀಡಲಿದೆ ಎನ್ನುತ್ತದೆ ಕಂಪೆನಿ. ಲ್ಯಾಕ್ಮೆ ಅಬ್ಸಲ್ಯೂಟ್ ವಿನೈಲ್ ಐ ಲೈನರ್‌ನಲ್ಲಿ ಕಾಂಪ್ಯಾಕ್ಟ್ ಪ್ಯಾಕಿಂಗ್ ಇದೆ. ಇದು ಕೊಂಡೊಯ್ಯಲು ಸುಲಭ. ಬ್ಲ್ಯಾಕ್ ಶೇಡ್‌ನಲ್ಲಿ ಲಭ್ಯ. ಬೆಲೆ 600 ರೂಪಾಯಿ.

ವಿವರಕ್ಕೆ: 9920986386




## ರಿಪ್ಪಲ್ ಫ್ರಾಗ್ರ್ರಾನ್ಸ್ ರೂಮ್ ಫ್ರೆಶ್ನರ್

ಸುಗಂಧ ದ್ರವ್ಯಕ್ಕೆ ಹೆಸರಾದ ರಿಪ್ಪಲ್ ಫ್ರಾಗ್ರ್ರಾನ್ಸ್ ಕಂಪೆನಿ ಇದೀಗ ಹೊಸ ಸುಗಂಧ ರಿಯಾ ಸುಗಂಧ ಸರಣಿಯನ್ನು ಬಿಡುಗಡೆ ಮಾಡಿದೆ. ಲ್ಯಾವೆಂಡರ್, ಜಾಸ್ಮಿನ್, ಚಂದನಂ, ರೋಸ್, ಸೀ ಶೋರ್ ಮುಂತಾದ ವೈವಿಧ್ಯಗಳಿವೆ. ಬೆಲೆ 120 ರೂಪಾಯಿ. ಎಲ್ಲ ಪ್ರಮುಖ ಮಳಿಗೆಗಳಲ್ಲಿ ಸಿಗುತ್ತದೆ. ಮಾಹಿತಿಗೆ: 97422 79654

## ರೂಷೊ ಸ್ಮಾರ್ಟ್ ಕ್ಯಾಷುವಲ್ ಸಂಗ್ರಹ

ಗುಣಮಟ್ಟದ ಶೂಗಳಿಗೆ ಹೆಸರಾದ ರೂಷೊ ಕಂಪೆನಿ ಇದೀಗ ಫಸ್ ಫ್ರೀ ಸ್ಮಾರ್ಟ್ ಕ್ಯಾಷುವಲ್ ಕಲೆಕ್ಷನ್ ಅನ್ನು ಮಾರುಕಟ್ಟೆಗೆ ತಂದಿದೆ.

ಆಕರ್ಷಕ ಬಣ್ಣ, ವಿನ್ಯಾಸಗಳಿಂದ ಕೂಡಿದ ಶೂಗಳು ಧರಿಸಲು ಆರಾಮದಾಯಕವಾಗಿವೆ.

ಬೆಲೆ 2,990 ರೂಪಾಯಿ. ಪ್ರಮುಖ ಮಳಿಗೆಗಳಲ್ಲಿ, ಮಾಲ್‌ಗಳಲ್ಲಿ ಲಭ್ಯ. ವಿವರಕ್ಕೆ: 080 64000185



## ಸೋನಿ ಎಕ್ಸ್‌ಪೀರಿಯ ಝುಡ್3+

ಸೋನಿ ಕಂಪೆನಿ ಇದೀಗ ಎಕ್ಸ್‌ಪೀರಿಯ ಝುಡ್3+ ಎಂಬ ಹೊಸ ಸ್ಮಾರ್ಟ್‌ಫೋನ್ ಒಂದನ್ನು ಬಿಡುಗಡೆ ಮಾಡಿದೆ. ಹೊಳೆಯುವ ಅಲ್ಯೂಮಿನಿಯಂ ಫ್ರೇಂ ಇದ್ದು, ಆಕರ್ಷಕ ಹಾಗೂ ಅದ್ಭುತವಾಗಿ ಕಾಣುವಂತಹ ಸ್ಮಾರ್ಟ್‌ಫೋನ್ ಇದಾಗಿದೆ ಎಂಬುದು ಕಂಪೆನಿ ಮಾತು.




ಡ್ಯೂರಬಲ್ ಟೆಂಪರ್ಡ್ ಗಾಜು ಹಾಗೂ ವೃತ್ತಾಕಾರದ ಅಂಚುಗಳನ್ನು ಹೊಂದಿದೆ. ಕೇವಲ 6.9 ಎಂಎಂ ದಪ್ಪ ಹಾಗೂ 144 ಗ್ರಾಂಗಳಿರುವ ಝುಡ್3+ ಅತ್ಯಂತ ಹಗುರ ಹಾಗೂ ಹಿಂದಿನ ಯಾವುದೇ ಫೋನ್‌ಗಳಿಗಿಂತಲೂ ತೆಳುವಾಗಿದ್ದು, ಹಿಡಿದುಕೊಳ್ಳಲು ಸುಲಭವಾಗಿದೆ.

ಎಕ್ಸ್‌ಪೀರಿಯ ಝುಡ್3+, ಎಕ್ಸ್ಮರ್ ಆರ್‌ಎಸ್ ಸೆನ್ಸಾರ್ ಹಾಗೂ 25 ಎಂಎಂ ವೈಡ್ ಆ್ಯಂಗಲ್ ಜಿ ಲೆನ್ಸ್ ಇದೆ. 20.7 ಎಂಪಿ ಕ್ಯಾಮೆರಾ ಇದ್ದು ಅದ್ಭುತ ಕ್ಯಾಮೆರಾ ಅನುಭವವನ್ನು ಒದಗಿಸುತ್ತದೆ. ಸೆಲ್ಫೀ ಪ್ರಿಯರಿಗೆ ಈ ಸ್ಮಾರ್ಟ್‌ಫೋನ್ ಹೊಸ ಅನುಭವ ನೀಡಲಿದೆ. 25 ಎಂಎಂ ವೈಡ್ ಆ್ಯಂಗಲ್ ಲೆನ್ಸ್‌ನೊಂದಿಗೆ 5 ಎಂಪಿ ಮುಂಬದಿ ಕ್ಯಾಮೆರಾ ಇದೆ. ಜೊತೆಗೆ ಇಂಟೆಲಿಜೆಂಟ್ ಆ್ಯಕ್ಟಿವ್ ಮೋಡ್ ಹಾಗೂ ಹೆಚ್‌ಡಿಆರ್ ವೈಶಿಷ್ಟ್ಯತೆಗಳೊಂದಿಗೆ ಸ್ಟಡಿಶಾಟ್ ಅನ್ನೂ ಹೊಂದಿದೆ. ಈ ಕ್ಯಾಮೆರಾ ಪರಿಪೂರ್ಣವಾದ ಲೋ ಲೈಟ್ ಫೋಟೊಗ್ರಫಿಗಾಗಿ 12,800 ಐಎಸ್‌ಒ ಸೂಕ್ಷ್ಮತೆಯನ್ನು ಹೊಂದಿದೆ.

ಬೆಲೆ 55,990 ರೂಪಾಯಿ. ಕಪ್ಪು, ಬಿಳಿ, ಕಾಪ್ಪರ್ ಹಾಗೂ ಆಕ್ವಾ ಗ್ರೀನ್ ಬಣ್ಣಗಳಲ್ಲಿ ಸಿಗುತ್ತದೆ.

## ಕಿಸಾನ್‌ನಿಂದ ಟ್ವಿಸ್ಟ್ ಸಾಸ್

ಸಾಸ್ ಮತ್ತು ಜಾಮ್ ವಲಯದಲ್ಲಿ ಜನಪ್ರಿಯ ಬ್ರ್ಯಾಂಡ್ ಎನಿಸಿರುವ ಕಿಸಾನ್, ಎರಡು ಹೊಸ ಸಾಸ್ ಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಕಿಸಾನ್ ಟ್ವಿಸ್ಟ್ ಎಂಬ ಹೆಸರಿನ ಈ ಸರಣಿ ಕೆಂಪು ಮೆಣಸಿನ ಕಾಯಿ ಮತ್ತು ಟೊಮ್ಯಾಟೊ ಮಿಶ್ರಣದ ಕಿಸಾನ್ ಸ್ವೀಟ್ ಅಂಡ್ ಸ್ಪೈಸಿ ಟ್ವಿಸ್ಟ್ ಹಾಗೂ ಹಸಿರು ಮೆಣಸಿನ ಕಾಯಿ ಕಿಸಾನ್ ಚಿಲ್ಲಿ ಟೊಮ್ಯಾಟೊ ಟ್ವಿಸ್ಟ್‌ಗಳನ್ನು ಹೊಂದಿದೆ.




ಈ ಸಾಸ್‌ಗಳನ್ನು ಯಾವುದೇ ಕೆಮಿಕಲ್ ಬಳಸದೆ ನೈಸರ್ಗಿಕವಾಗಿ ಬೆಳೆದ ಟೊಮ್ಯಾಟೊದಿಂದ ಮಾಡಲಾಗಿದೆ. ಜ್ಯೂಸಿ ಟೊಮ್ಯಾಟೊದಿಂದ ಸಿದ್ಧಗೊಂಡ ಕಿಸಾನ್ ಚಿಲ್ಲಿ ಟೊಮ್ಯಾಟೊ ಸಾಸ್ ಫ್ರೆಂಚ್ ಫ್ರೈನಿಂದ ಪೋಹ ಮತ್ತು ಪರೋಟದವರೆಗೆ ರುಚಿಗೆ ಟ್ವಿಸ್ಟ್ ನೀಡುತ್ತದೆ ಎನ್ನುವುದು ಕಂಪೆನಿ ವಿವರಣೆ. 200 ಗ್ರಾಂ, 500 ಗ್ರಾಂ ಮತ್ತು ಒಂದು ಕೆಜಿ ತೂಕದಲ್ಲಿ ಪಡೆಯಬಹುದು. ಬೆಲೆ 51ರೂಪಾಯಿಯಿಂದ ಆರಂಭ. ಮಾಹಿತಿಗೆ: 9820286866